ಶಿವಾನಿ ಗಂಡನನ್ನು ಕಳೆದುಕೊಂಡು ಹೇಗಿರಬಹುದು? ಅವನಿಗೆ ಫಕ್ಕನೆ ಸಿನಿಮಾ, ಸೀರಿಯಲ್‌ಗಳಲ್ಲಿ ತೋರಿಸುವ ಯುವ ವಿಧವೆಯರ ನೆನಪಾಯಿತು. ಬೋಳುಹಣೆ, ಬೋಳುಕೈ, ಬಿಳಿಸೀರೆ... ಛೆ ಛೆ ಶಿವಾನಿ ಹಾಗಿರಲಾರಳು. ಅವಳು ಈಗಿನಕಾಲದವಳು. ಒಂದು ವೇಳೆ ಶಿವಾನಿ ಮರುಮದುವೆಯಾಗಲು ಒಪ್ಪಿದರೆ ರಚನಾಗೆ ಹೇಗೆ ಈ ವಿಷಯ ಹೇಳೋದು? ಅವಳಿಗೆ ಈ ವಿಚಾರ ಎಂತಹ ಆಘಾತ ತರಬಹುದು? ಯೋಚಿಸಿ ಯೋಚಿಸಿ ಅವನ ತಲೆಕೆಟ್ಟುಹೋಯಿತು.

ಮರುದಿನ ಬೆಳಗ್ಗೆ 10 ಗಂಟೆಗೆಲ್ಲಾ ಅವನು ಮೈಸೂರಿನಲ್ಲಿದ್ದ. ಬಾಲು ಕಾರು ತಂದಿದ್ದ. ಇಬ್ಬರೂ ತಿಂಡಿತಿಂದರು.

"ಸೂರ್ಯ ನಾನು ನಿನ್ನನ್ನು ಶಿವಾನಿ ಮನೆಗೆ ಡ್ರಾಪ್ ಮಾಡ್ತೀನಿ. ನಿನ್ನ ಮಾತುಕತೆ ಆದಮೇಲೆ ನನಗೆ ಫೋನ್ ಮಾಡು."

"ನೀನು ಶಿವಾನಿ ಮನೆಗೆ ಬರಲ್ವಾ?"

"ಇಲ್ಲ. ನೀವು ಮಾತಾಡುವಾಗ ನಾನು ಎದುರಿಗಿರೋದು ಒಳ್ಳೆಯದಲ್ಲ."

ಬಾಲು ಅವನನ್ನು ಶಿವಾನಿಯ ಮನೆ ಬಳಿ ಬಿಟ್ಟ. ಆ ಭವ್ಯ ಬಂಗಲೆಯನ್ನು ನೋಡಿ ಸೂರ್ಯ ದಂಗಾದ. ತಕ್ಷಣ ಅವನಿಗೆ ತಮ್ಮ ಎರಡು ಕೋಣೆಯ ಬಾಡಿಗೆಮನೆ ನೆನಪಾಯಿತು. ಅವನು ಬೆಲ್ ಮಾಡಿದಾಗ ಶಿವಾನಿಯ ತಾಯಿ ಬಾಗಿಲು ತೆರೆದರು.

"ಓ ಸೂರ್ಯ ಬಾಪ್ಪ ಒಳಗೆ."

"ಶಿವಾನಿ ಇದಾಳಾ?"

"ಇದಾಳೆ ಕಳಿಸ್ತೀನಿ."

ಅವನು ಟೀಪಾಯ್ ಮೇಲಿದ್ದ ಪೇಪರ್ ಕೈಗೆ ತೆಗೆದುಕೊಂಡ. ಎರಡು ನಿಮಿಷಗಳಲ್ಲಿ ಶಿವಾನಿ ಬಂದಳು. ಜೀನ್ಸ್‌ಪ್ಯಾಂಟ್, ಶಾರ್ಟ್‌ಟಾಪ್, ಹಾರಾಡುತ್ತಿದ್ದ ಕೂದಲು ಅವಳ ಅಂದ ಹೆಚ್ಚಿಸಿದ್ದವು. ಅವಳು ಆರಾಮವಾಗಿರುವುದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು.

"ಹಾಯ್ ಸೂರ್ಯ. ಹೌ ಆರ್ ಯೂ?"

"ಐಯಾಮ್ ಫೈನ್..."

"ನಾನೂ ಚೆನ್ನಾಗಿದ್ದೇನೆ. ನೀನು ಯಾಕೆ ನನ್ನನ್ನು ಭೇಟಿ ಮಾಡಲು ಬಂದಿದ್ದೀಯಾಂತ ನನಗೆ ಗೊತ್ತು."

ಅವನು ಮಾತನಾಡಲಿಲ್ಲ.

"ನಾನು ತುಂಬಾ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡ್ತೀನಿ. ನಾನು ಶ್ರೀಮಂತ ಕುಟುಂಬಕ್ಕೆ ಸೇರಿದವಳು. ಸುಮೇರು ಶ್ರೀಮಂತ, ಬುದ್ಧಿವಂತ, ಸ್ಮಾರ್ಟ್ ಆಗಿದ್ದಾನೇಂತ ನಾನವನನ್ನು ಮೆಚ್ಚಿದೆ. ನಾನವನನ್ನು ತುಂಬಾ ಪ್ರೀತಿಸ್ತಿದ್ದೆ. ಮದುವೆಯಾದ ಕೆಲವೇ ದಿನಗಳಲ್ಲಿ ನನಗವನ ವೀಕ್ನೆಸ್ ಗೊತ್ತಾಯ್ತು. ಅವನು ಸ್ವಂತ ನಿರ್ಧಾರ ತೆಗೆದುಕೊಳ್ಳಲು ಅನರ್ಹನಾಗಿದ್ದ. ಅವನಿಗೆ ತಂದೆತಾಯಿಯ ಬಗ್ಗೆ ಹುಚ್ಚು ಪ್ರೀತಿ. ಅದವನ ದೌರ್ಬಲ್ಯ. ನನಗೆ ಅವನ ತಂದೆತಾಯಿ ಜೊತೆ ಇರೋದು ಬೇಕಿರಲಿಲ್ಲ. ಈ ವಿಚಾರ ಹೇಳುವುದರೊಳಗೆ ಅವನು ಕಾಯಿಲೆಬಿದ್ದ. ಅವನ ಕಾಯಿಲೆ ವಿಚಾರ ಗೊತ್ತಾದ ತಕ್ಷಣ ನಾನವನಿಂದ ದೂರವಾಗ್ತಾ ಹೋದೆ..."

"ಯಾಕೆ?"

"ನನಗೆ ಬದುಕುವುದು ಬೇಕಿತ್ತು. ಅವನನ್ನು ತುಂಬಾ ಹಚ್ಚಿಕೊಂಡರೆ ನನಗವನನ್ನು